ಪರಿಸ್ಥಿತಿಯಲ್ಲಿ ಸುಧಾರಣೆ ಆಗಲಿಲ್ಲ. ಇನ್ನು ಪ್ರೈವೇಟ್ ಡಾಕ್ಟ್ರ ಹತ್ರ ಹೋಗೋಣ ಎಂದು ಸುಳ್ಯದ ಪ್ರಖ್ಯಾತ ಮೂಳೆತಜ್ಞರ ಹತ್ತಿರ ಹೋದೆವು. ಅವರು ನನ್ನನ್ನು ನೋಡಿ, 'ನೀವೀಗ ಜವ್ವಂತಿ ಅಲ್ಲ. ಅಜ್ಜಿ ಆಗಿದ್ದೀರಿ ಎಂಬುದರ ಸೂಚನೆ ಇದು. ಮೊದಲಿನಂತೆ ಓಡಲು ಈಗ ಆಗುತ್ತದಾ? ಇನ್ನು ನೀವು ನಿಧಾನ ಹೋಗಬೇಕು. ಮೊಣಗಂಟಿನ ಮೂಳೆ ಸವೆಯಲು ಆರಂಭ ಆಗಿದೆ' ಎಂದು ಹೊಟ್ಟೆ ತುಂಬುವಷ್ಟು ಮೂರು ಹೊತ್ತು ತಿನ್ನಲು ಒಂದು ವಾರಕ್ಕಾಗುವ ಮಾತ್ರೆ ಕೊಟ್ಟರು. ವಾಸಿ ಆಗದಿದ್ದರೆ ಪುನಃ ಬರಲು ಹೇಳಿದರು. ಆ ಮಾತ್ರೆಗಳನ್ನೂ ತಿಂದದ್ದಾಯಿತು. ಏನೂ ಪ್ರಯೋಜನ ಕಾಣಲಿಲ್ಲ. ನಡೆಯಬೇಕಾದರೆ ಕೋಲು ಬೇಕೇ ಬೇಕಿತ್ತು. ಹುಟ್ಟಿ ಇಂದಿನವರೆಗೆ ಹೆರಿಗೆ ಸಮಯದಲ್ಲಿ ಬಿಟ್ಟು ಉಳಿದಂತೆ ಡಾಕ್ಟ್ರ ಸಹವಾಸ ಮಾಡಿದ್ದು ಕಡಿಮೆ. ಶೀತ, ಜ್ವರ ಬಂದರೆ ಕಾಳುಮೆಣಸು ಪುಡಿ–ಜೇನು ಸೇವನೆ, ಅಮೃತಬಳ್ಳಿ ಕಷಾಯ, ಶುಂಠಿ ಕಷಾಯ ಇಷ್ಟರಿಂದಲೇ ಗುಣವಾಗುತ್ತಿತ್ತು. ಆದರೆ, ಈಗ ಡಾಕ್ಟರನ್ನು ಕಾಣಲೇ ಬೇಕಿತ್ತು. ಮಾತ್ರೆ ತಿನ್ನಲೇ ಬೇಕಿತ್ತು. ಬೇರೆ ಗತಿ ಇರಲಿಲ್ಲ. ಪುನಃ ಅದೇ ಡಾಕ್ಟರಲ್ಲಿಗೆ ಹೋದೆವು. ಅವರು ಕೆಲವು ಮಾತ್ರೆಗಳನ್ನು ಬದಲಿಸಿ ಕೊಟ್ಟರು. ಆ ಮಾತ್ರೆಗಳಿಂದಲೂ ನನಗೆ ವಾಸಿ ಆಗಲಿಲ್ಲ.

ಕಾಲು ನೋವಿನಿಂದ ನಾನು ಪಡುವ ಕಷ್ಟ ನೋಡಲಾರದೆ ಗಂಡ, 'ಅವರಷ್ಟೇ ಖ್ಯಾತರಾದ ಇನ್ನೊಬ್ಬ ಮೂಳೆತಜ್ಞರು ಸುಳ್ಯದಲ್ಲಿ ಇದ್ದಾರೆ. ಅವರಿಗೆ ತೋರಿಸಿ ನೋಡೋಣ. ಅವರು ಏನು ಹೇಳುತ್ತಾರೆಂದು ಗೊತ್ತಾಗುತ್ತದೆ' ಎನ್ನುತ್ತ ಅವರಲ್ಲಿಗೆ ನನ್ನನ್ನು ಕರೆದುಕೊಂಡು ಹೋದರು. ಆ ಡಾಕ್ಟರಿಗೆ ಹಿಂದೆ ತೋರಿಸಿದ ಇಬ್ಬರು ಡಾಕ್ಟರುಗಳ ಚೀಟಿಯನ್ನೂ ತೋರಿಸಿದೆ. ಅವರು, 'ನಾನೇ ಸ್ವತಃ ಕಾಲಿನ ಎಕ್ಸರೇ ತೆಗೆದು ಏನಾಗಿದೆ ಎಂದು ನೋಡುತ್ತೇನೆ' ಎಂದು ಅಲ್ಲೇ ಇರುವ ಬೆಂಚಿನಲ್ಲಿ ನನ್ನ ಮಲಗಿಸಿ ಮೊಣಕಾಲಿನ ಎಕ್ಸರೇ ತೆಗೆದರು. 'ಮಂಡಿಯಲ್ಲಿ ಅಂಥಾ ಸವೆತವೇನೂ ಕಾಣುವುದಿಲ್ಲ. ಮಾತ್ರೆ ಕೊಡುತ್ತೇನೆ. ಕೆಲವು ವ್ಯಾಯಾಮಗಳನ್ನು ಹೇಳಿಕೊಡುತ್ತೇನೆ. ಹಾಸಿಗೆಯಿಂದ ಏಳುವಾಗ ಇವುಗಳನ್ನು ಮಾಡಿಯೇ ಏಳಬೇಕು' ಎಂದರು. ಅವರು ಬರೆದು ಕೊಟ್ಟ ಮಾತ್ರೆಗಳ ಕಟ್ಟನ್ನು ತಂದು



ನುಂಗಿದ್ದಾಯಿತು. ಏಳುವ ಮೊದಲೇ ಹಾಸಿಗೆಯಲ್ಲೇ ಕೂತು ವ್ಯಾಯಾಮ ಮಾಡಿದ್ದಾಯಿತು. ನನ್ನ ಮಂಡಿನೋವು ಮೊದಲಿನಂತೆ.

ಈಗ ನನ್ನ ಮೊಣಗಂಟು ನೋವಿನ ಸುದ್ದಿ ಊರು ದಾಟಿ ಪರವೂರಿನಲ್ಲಿರುವ ಬಂಧುಬಳಗಕ್ಕೆಲ್ಲ ಹಬ್ಬಿತು. ಮಂಗಳೂರಿನಲ್ಲಿ ಡಾಕ್ಟರ್ ಆಗಿರುವ ನನ್ನ ಬಂಧುಗಳೊಬ್ಬರು ಫೋನ್ ಮಾಡಿ, 'ನಾನು ಕೆಲಸ ಮಾಡುವ ಆಸ್ಪತ್ರೆಯಲ್ಲಿ ಇಂಗ್ಲೆಂಡಿನಿಂದ ಬಂದ ಪ್ರಸಿದ್ಧ ಮೂಳೆತಜ್ಞರಿದ್ದಾರೆ. ಅವರು ಎಂಥ ಮಂಡಿನೋವನ್ನೂ ವಾಸಿ ಮಾಡುತ್ತಾರೆ. ಅವರಿಗೊಮ್ಮೆ ತೋರಿಸಿ' ಎಂದು ಹೇಳಿದರು.